**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 65/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 18-07-2025** **ಪಿ ಡಬ್ಲ್ಯೂ2**

**ಪಾಟೀ ಸವಾಲುಃ** 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎಸ್ ವಿ ಪಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಶೆಡ್ಯೂಲ್ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ವಾದಿಯರ ಕುಟುಂಬಕ್ಕೆ ಒಟ್ಟು ಎಷ್ಟು ಜಮೀನುಗಳು ಇದೆ ಅವುಗಳ ಸರ್ವೆ ನಂಬರ್, ಕ್ಷೇತ್ರ, ವಿಸ್ತೀರ್ಣ ನನಗೆ ಗೊತ್ತಿಲ್ಲ. ಸರ್ವೆ. 135/3 ಪಿ ರಲ್ಲಿ 11 ಎಕರೆ 4 ಗುಂಟೆ ಜಮೀನು ಇದೆ ಎಂದರೆ ನನಗೆ ಮಾಹಿತಿ ಅಷ್ಟೊಂದು ಇಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ 1980-81 ರಲ್ಲಿ ಸದರಿ ಜಮೀನಿನಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರ ಕುಟುಂಬದ ಮುಖ್ಯಸ್ಥರು ರುದ್ರಪ್ಪ ಎಂದರೆ ಸರಿ. ಸದರಿ ರುದ್ರಪ್ಪನಿಗೆ ಸರ್ವೆ 135/3 ರಲ್ಲಿ 5 ಎಕರೆ 7 ಗುಂಟೆ ಜಮೀನು ಬಂದಿರುತ್ತದೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ವಾದಿಯರು ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು 11 ಎಕರೆ 4 ಗುಂಟೆ ಜವೀನನ್ನು ಸಾಗುವಳಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು 1 ನೇ ವಾದಿಯ ಜಮೀನಿನ ಪಹಣಿಗಳನ್ನು ನೋಡಿದ್ದೇನೆ. ರುದ್ರಪ್ಪನಿಗೆ ಬಂದ 5 ಎಕರೆ 7 ಗುಂಟೆ ಜಮೀನನ್ನು ವಾದಿಯರು ಪಾಲು ವಿಭಾಗ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ.

ನನಗೆ ಟ್ರಾಕ್ಟರ್ ನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಇಲ್ಲ ಎಂದರೆ ಸರಿ. ನನಗೆ ಟ್ರಾಕ್ಟರ್ ಚಾಲನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಜಮೀನುಗಳು ನಮ್ಮ ಊರಿನಲ್ಲಿ ಇವೆ. ನಮ್ಮ ಜಮೀನಿನ ಸರ್ವೆ ನಂ. 180 ರಲ್ಲಿ ಇದೆ. ಪೋಡು ನಿಖರವಾಗಿ ನನಗೆ ಗೊತ್ತಿಲ್ಲ. ಸದರಿ ನಮ್ಮ ಜಮೀನು ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿಗೆ ಇದೆ. ಸದರಿ ಜಮೀನು ಈಗ ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ ಇದೆ. ಸದರಿ ಜಮೀನು ನಮಗೆ ಸಂಬಂದಪಟ್ಟ ಅಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಅಣ್ಣನ ಹೆಸರಿಗೆ ಸರ್ವೆ ನಂಬರ್ 81/10 ರಲ್ಲಿ 29 ಗುಂಟೆ ಜಮೀನು ಇದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಸದರಿ ದಾಖಲೆ ತಮ್ಮ ಜಮೀನಿನ ಪಹಣಿ ಎಂದು ಒಪ್ಪಿದ ಮೇರೆಗೆ ಅದನ್ನು **ಮುಖಾಬಿಲೆಯಾಗಿ ನಿಡಿ.1** ಎಂದು ಗುರುತಿಸಲಾಯಿತು. ನಮ್ಮ ಜಮೀನು ನಮ್ಮ ಊರಿನ ಪೂರ್ವ ದಿಕ್ಕಿಗೆ ಬರುತ್ತದೆ. ನಮ್ಮ ಊರಿನಿಂದ ಅರ್ದ ಕಿ ಮೀ ದೂರದಲ್ಲಿದೆ. ವಾದಿ ಮತ್ತು ಪ್ರತಿವಾದಿಯರ ಜಮೀನು ನಮ್ಮ ಊರಿನಿಂದ ದಕ್ಷಿಣ ದಿಕ್ಕಿಗೆ ಬರುತ್ತದೆ. ನನ್ನ, ವಾದಿ ಮತ್ತು ಪ್ರತಿವಾದಿಯರ ಜಮೀನು ಅಕ್ಕಪಕ್ಕದಲ್ಲಿ ಇಲ್ಲ ಎಂದರೆ ಸರಿ.

ಪ್ರತಿವಾದಿಯರು ವಾದಿಯರ ದಾವಾ ಆಸ್ತಿಯ ಸ್ವಾದೀನತೆಗೆ ತೊಂದರೆಯನ್ನು ಪಡಿಸಿರುವುದು ನನಗೆ ತಿಳಿದಿದೆ ಆದರೆ ಯಾವಾಗ ಎಂದು ತಿಳಿದಿಲ್ಲ. ದಾವಾ ಶೆಡ್ಯೂಲ್ ಆಸ್ತಿಗೆ ವಾದಿಯರು ಹಕ್ಕುದಾರರು, ಮಾಲೀಕರು ಮತ್ತು ಅನುಭವದಾರರು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ 1 ರಿಂದ 4 ನೇ ಪ್ರತಿವಾದಿಯರು ಮಾಲೀಕರು ಮತ್ತು ಅನುಭವದಾರರು ಅಲ್ಲ ಎಂದರೆ ಸರಿಯಲ್ಲ.

ನಮ್ಮ ಊರಿನ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಸಾಕಮ್ಮ ನಮ್ಮ ಸಂಬಂದಿಕರು ಎಂದರೆ ಸರಿ. ನಾನು ಅವರ ಹಿಂಬಾಲಿಕರಲ್ಲಿ ಒಬ್ಬರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಸಂಬಂದಿಕರು ಜಯಪ್ಪ ನಮ್ಮ ಊರಿನ ಗ್ರಾಮ ಪಂಚಾಯ್ತಿ ಸದಸ್ಯರು ಎಂದರೆ ಸರಿ. ಜಯಪ್ಪ ಮತ್ತು ಸಾಕಮ್ಮನವರು ಬೇರೆ ಬೇರೆ ಪಕ್ಷದ ಅಭ್ಯರ್ಥಿಗಳು ಎಂದರೆ ಸರಿ. 3 ನೇ ವಾದಿ ಭಾಗ್ಯಮ್ಮ ಮತ್ತು ಸಾಕಮ್ಮನ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ